# ತಮಿಳು ನಾಡು ಸರಕಾರದಿಂದ ಭತ್ತದ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

ಕೇಂದ್ರ ಸರಕಾರ ಇತ್ತೀಚೆಗೆ ಭತ್ತದ ಕನಿಷ್ಠ ಬೆಂಬಲ ಬೆಲೆ, ಸಾಮಾನ್ಯ ಉತ್ತಮ ದರ್ಜೆ ಭತ್ತಕ್ಕೆ ಕ್ವಿಂ. ಗೆ ರೂ.1450 ಹಾಗೂ ಸಾಮಾನ್ಯ ದರ್ಜೆಯ ಭತ್ತಕ್ಕೆ ಕ್ವಿಂ. ಗೆ ರೂ.1410 ಎಂದು ನಿಗದಿ ಗೊಳಿಸಿದೆ. ಕೃಷಿಕರ ಕಲ್ಯಾಣದ ದೃಷ್ಟಿಯಿಂದ ಇದಕ್ಕೆ ಕ್ವಿಂ.ಗೆ ಸಾಮಾನ್ಯ ಉತ್ತಮ ದರ್ಜೆಯ ಭತ್ತಕ್ಕೆ ಕ್ವಿಂ.ಗೆ ರೂ.70 ಹಾಗೂ ಸಾಮಾನ್ಯ ಭತ್ತಕ್ಕೆ ಕ್ವಿಂ.ಗೆ ರೂ.50 ಹೆಚ್ಚಿನ ದರ ನೀಡಿ ಸಾಮಾನ್ಯ ಉತ್ತಮ ಭತ್ತ ಕ್ವಿಂ. ಗೆ ರೂ.1520 ಹಾಗೂ ಸಾಮಾನ್ಯ ಭತ್ತ ಕ್ವಿಂ. ಗೆ ರೂ. 1460ರ ದರದಲ್ಲಿ ಸಂಗ್ರಹಿಸುವುದೆಂದು ತಮಿಳುನಾಡು ಮುಖ್ಯ ಮಂತ್ರಿ ಜೆ. ಜಯಲಲಿತಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.